ಈ) ಯಶಸ್ವಿನಿ ಯೋಜನೆಯು ಸ್ವಂತ ಬಂಡವಾಳ ಯೋಜನೆಯಾಗಿದ್ದು ಯಶಸ್ವಿನಿ ಫಲಾನುಭವಿಗಳಿಂದ ಸಂಗ್ರಹಿಸಿದ ಅಲ್ಪ ಮೊತ್ತ ರೂ.120/- ಇದು ಯೋಜನೆಯ ವೆಚ್ಚವನ್ನು ಸರಿದೂಗಿಸಲು ಸಾಲುತ್ತಿಲ್ಲ. ಆದ್ದರಿಂದ, ಔಷಧಿ, ಇಂಜೆಕ್ಷನ್, ಸ್ಟೆಂಟ್‌ವಾಲ್ವ್ ಇವುಗಳ ವೆಚ್ಚವನ್ನು ಯಶಸ್ವಿನಿ ಟ್ರಸ್ಟು ಭರಿಸುವುದು ಸಾಧ್ಯವಾಗುವುದಿಲ್ಲ. ಸದರಿ ಉದ್ದೇಶಗಳಿಗಾಗಿ ಆದ ವೆಚ್ಚವನ್ನು ಯಶಸ್ವಿನಿ ಫಲಾನುಭವಿಯಿಂದ ನೆಟ್‌ವರ್ಕ್ ಆಸ್ಪತ್ರೆ ಸಂಗ್ರಹಿಸಬಹುದು.

ಉ) ಸದ್ಯಕ್ಕೆ ಯಶಸ್ವಿನಿ ಫಲಾನುಭವಿಗಳು ಎಲ್ಲ ವೆಚ್ಚವನ್ನು ಯಶಸ್ವಿನಿ ಟ್ರಸ್ಟು ಭರಿಸಿಸುವುದು ಸಾಧ್ಯವಿಲ್ಲ.

**1218 (1565) ಶ್ರೀ ಸಿದ್ದು ಸಾವದಿ (ಜಮಖಂಡಿ) :** ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2005-06ರ ತನಕ ರೈತರಿಗೆ ರಾಜ್ಯದ ಕೃಷಿ ಪತ್ತಿನ ಸಂಘಗಳು ಸಾಲ ಮತ್ತು ಬಡ್ಡಿ ಮನ್ನಾ ಮಾಡಿರುವ ರೀತಿಗಳು ಯಾವುವು?

ಆ) ಇದರಿಂದ ಎಲ್ಲ ರೀತಿ ಸಾಲ ಪಡೆದ ರೈತರಿಗೆ ಅಸಲು ಮತ್ತು ಬಡ್ಡಿ ಮನ್ನಾ ಸೌಲಭ್ಯ ದೊರೆತಿದೆಯೇ?

ಇ) ಹಾಗಿದ್ದಲ್ಲಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಸಾಲ ಪಡೆದ ಚಾಲ್ತಿ ಸಾಲಗಾರರಿಗೆ ಬಡ್ಡಿ ಮನ್ನಾ ಸೌಲಭ್ಯ ದೊರೆತಿಲ್ಲದಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಪ್ರತಿ ವರ್ಷ ಅವಧಿ ಒಳಗಾಗಿ ಅಸಲು ಮತ್ತು ಬಡ್ಡಿ ತುಂಬುವ ರೈತರಿಗೆ ಅನ್ಯಾಯವಾಗುವುದಿಲ್ಲವೇ?

ಉ) ಇದಕ್ಕೆ ಸರ್ಕಾರದ ಆದೇಶವೇನು?

**ಶ್ರೀ ಜಿ. ಟಿ. ದೇವೇಗೌಡ (ಸಹಕಾರ ಸಚಿವರು) :**

ಅ) 2005-06ರ ತನಕ ರಾಜ್ಯದ ರೈತರಿಗೆ ರಾಜ್ಯ ಸರ್ಕಾರ ಬಡ್ಡಿ ಮನ್ನಾ ಮಾಡಿರುವ ವಿವರಗಳು ಕೆಳಕಂಡಂತಿರುತ್ತವೆ.

1) 2002ರ ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ರೈತರಿಗೆ ನೀಡಲಾದ ಬೆಳೆ ಸಾಲಗಳ ಮೇಲಿನ ಬಡ್ಡಿ ಮನ್ನಾ
2) ಪಿಕಾರ್ಡ್ ಬ್ಯಾಂಕುಗಳು ನೀಡಿರುವ ದೀರ್ಘಾವಧಿ ಸಾಲಗಳ ಬಾಬ್ತು ಶೇ.9ಕ್ಕಿಂತ ಹೆಚ್ಚಿನ ಬಡ್ಡಿಯನ್ನು ಮನ್ನಾ ಮಾಡಿರುವುದು

3) ಪಿಕಾರ್ಡ್ ಬ್ಯಾಂಕುಗಳು ತೋಟಗಾರಿಕೆ ಬೆಳೆಗಳಿಗೆ ನೀಡಿರುವ ದೀರ್ಘಾವಧಿ ಸಾಲಗಳ ಮೇಲಿನ ಬಡ್ಡಿ ಮನ್ನಾ

4) ಅಸಲಿಗಿಂತ ಹೆಚ್ಚು ಬಡ್ಡಿಯನ್ನು ಪಾವತಿಸಿರುವ ರೈತರ ಬಾಕಿ ಸಾಲ ಮನ್ನಾ

5) ವಿಫಲಬಾವಿ ಪರಿಹಾರ ಯೋಜನೆಯಡಿ ಸಹಾಯಧನ

6) ರೈತರಿಗೆ ಶೇಕಡ 6ರ ಬಡ್ಡಿದರದಲ್ಲಿ ಕೃಷಿ ಸಾಲ ನೀಡಿಕೆ ಬಾಬ್ತು ಬಡ್ಡಿ ಸಹಾಯಧನ

7) ಸಹಕಾರ ಸಂಘಗಳು ರೈತರಿಗೆ ವಿತರಿಸುವ ಅಲ್ಪಾವಧಿ, ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲಗಳ ಮೇಲಿನ ಬಡ್ಡಿ, ದಂಡದ ಬಡ್ಡಿ ಮನ್ನಾ

ಆ) ಎಲ್ಲಾ ರೀತಿಯ ಸಾಲ ಪಡೆದ ರೈತರಿಗೆ ಅಸಲು ಮತ್ತು ಬಡ್ಡಿಮನ್ನಾ ಸೌಲಭ್ಯ ದೊರೆತಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಸತತ ಬರಗಾಲ, ಬೆಳೆಹಾನಿ ಇತ್ಯಾದಿ ಪ್ರಕೃತಿ ವಿಕೋಪಗಳಿಂದ ತೊಂದರೆಗೊಳಗಾದ ರೈತರ ಹಿತದೃಷ್ಟಿಯಿಂದ ಬಡ್ಡಿ ದರದ ಬಡ್ಡಿ ಮನ್ನಾದಂತಹ ಸೌಲಭ್ಯಗಳನ್ನು ಸರ್ಕಾರವು ಒದಗಿಸಿರುವುದರಿಂದ ಅನ್ಯಾಯ ಆಗುವುದಿಲ್ಲ.

ಉ) ಎಲ್ಲಾ ರೈತರಿಗೂ ಕಡಿಮೆ ಬಡ್ಡಿ ದರದಲ್ಲಿ ಕೃಷಿ ಸಾಲ ದೊರೆಯಬೇಕೆಂಬ ಕಾರಣದಿಂದ ದಿನಾಂಕ: 01-04-2006 ರಿಂದ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳು ಶೇಕಡ 4 ರ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು ರೈತರಿಗೆ ನೀಡುತ್ತಿದ್ದು ಈ ಸಂಬಂಧದಲ್ಲಿ ಸರ್ಕಾರವು ರೈತರ ಪರವಾಗಿ ಬಡ್ಡಿಸಹಾಯ ಧನವನ್ನು ಭರಿಸಿಕೊಡುತ್ತಿದೆ.

**1219 (1276) ಶ್ರೀ ಶ್ರೀರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) :** ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಪಡಿತರ ಚೀಟಿ ವಿತರಣೆಯಲ್ಲಿ ಗೊಂದಲ ಮುಂದುವರೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದಲ್ಲಿ ರಾಜ್ಯದಲ್ಲಿನ ಎಲ್ಲಾ ಅರ್ಹ ಬಡವರಿಗೂ ಬಿಪಿಎಲ್ ಕಾರ್ಡ್ ವಿತರಿಸಲು ಸರ್ಕಾರ ಉದ್ದೇಶಿಸಿದೆಯೇ?

ಇ) ಆಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?